ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-263462
ಫ್ಯಾಕ್ಸ್: 08192 - 260969

ತ್ರೈಮಾಸಿಕ ಪತ್ರಿಕೆ
Quarterly News Letter
ಜುಲೈ - ಸೆಪ್ಟೆಂಬರ್ 2011

ಮಿಂಚಂಚೆ: dvgtkvk@yahoo.com
Website:www.taralabalukvk.com
ಸಂಪುಟ- 4 ಸಂಚಿಕೆ- 4

## ಸಿಂಚನಕ್ಕೆ ಮುನ್ನ.........

**ಸಹೃದಯ ಬಂಧುಗಳೇ,**

ಮುಂಗಾರು ಮಳೆಯ ವೈಪರೀತ್ಯಗಳ ನಡುವೆ ನಮ್ಮ ದಾವಣಗೆರೆ ಜಿಲ್ಲೆಯ ರೈತರು ಅನೇಕ ಬೆಳೆಗಳನ್ನು ಬೆಳೆದು ಸೈ ಎನಿಸಿಕೊಂಡಿದ್ದಾರೆ. ಸೆಪ್ಟೆಂಬರ್ ಅಂತ್ಯದವೇಳೆಗೆ 415.7 mm ಮಳೆ ಬಂದಿದೆ (ವಾಡಿಕೆ 490.1). ಒಟ್ಟಾರೆ, ಇಡೀ ದೇಶದಲ್ಲಿ ಈ ವರ್ಷ ಎಂದಿಗಿಂತಲೂ 1% ಹೆಚ್ಚು ಮಳೆ ಬಿದ್ದಿದೆ. ಆದರೆ ನಮ್ಮ ಅಸಮರ್ಪಕ ಸಿದ್ದತೆಗಳಿಂದಾಗಿ ಅಂದುಕೊಂಡಂತೆ ಯಶಸ್ಸು ಸಿಕ್ಕಿಲ್ಲ. ಈ ಪತ್ರ ನಿಮ್ಮ ಕೈ ಸೇರುವಾಗ, ಹಿಂಗಾರಿನ ಹುಚ್ಚು ಮಳೆಯಿಂದಾಗಿ ಅನಾಹುತಗಳಾಗಬಹುದೆಂಬ ಆತಂಕ ಹೆಚ್ಚಾಗಿತ್ತು ಹ್ನ, ಹಾಗೇನು ಆಗಿಲ್ಲ.

ಈ ನಡುವೆ 'ನಿಕ್ರಾ' ಯೋಜನೆಯ ಸಿದ್ದನೂರಿನಲ್ಲಿ ಮೆಕ್ಕೆಜೋಳ, ರಾಗಿ, ಹತ್ತಿ, ಬಾಳೆ, ಮಾವು, ಸಸಿ ನರ್ಸರಿ, ಅರಣ್ಯೀಕರಣ, ಪಶುಸಂಗೋಪನೆ ಹೀಗೆ ಹಲವಾರು ಮುಂಚೂಣಿ ಪ್ರಾತ್ಯಕ್ಷಿಕೆಗಳು, ಸ್ವ ಉದ್ಯೋಗಾವಕಾಶಗಳ ಉದ್ಯಮಗಳನ್ನು ಅಭಿವೃದ್ದಿಪಡಿಸುವ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದೇವೆ. ನಮ್ಮ ವಲಯ ಯೋಜನಾ ನಿರ್ದೇಶಕರಾದ ಡಾ. ಎಸ್. ಪ್ರಭುಕುಮಾರ್ ರವರು ಸಿದ್ದನೂರಿಗೆ ಭೇಟಿ ನೀಡಿ ಪ್ರಗತಿ ಪರಿಶೀಲಿಸಿ ಸಲಹೆಗಳನ್ನು ನೀಡಿದರು.

ಕೃಷಿ ತಂತ್ರಜ್ಞಾನ ಸಪ್ತಾಹ 2011 ಈ ತ್ರೈಮಾಸಿಕ ಅವಧಿಯ ಪ್ರಮುಖಾಂಶ ಎನ್ನಬಹುದು. ಜಿಲ್ಲೆಯ 5 ತಾಲ್ಲೂಕುಗಳ ವಿವಿಧ ಹಳ್ಳಿಗಳಲ್ಲಿ ವಿಶೇಷ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಮಾಲೆಯನ್ನು "ವಾಯುಗುಣ ಬದಲಾವಣೆ ಮತ್ತು ಕೃಷಿಯ ಮೇಲೆ ಅದರ ಪರಿಣಾಮಗಳು" ಎಂಬ ಮುಖ್ಯ ಶೀರ್ಷಿಕೆಯಡಿಯಲ್ಲಿ ನಡೆಸಿದ್ದು, ನಮಗೂ ವಿಶೇಷ ವಿನೂತನ ಅನುಭವವನ್ನು ನೀಡಿತು. ಇದಕ್ಕೆಲ್ಲ ನಮ್ಮ ಬೆನ್ನಿಗೆ ನಿಂತಿದ್ದು ಜಂಟಿ ಕೃಷಿ ನಿರ್ದೇಶಕರಾದ ಡಾ.ಆರ್.ಜಿ.ಗೊಲ್ಲರ್ ರವರು ಮತ್ತು ಅವರ ಕೃಷಿ ಇಲಾಖೆ ಈ ಎರಡು ಸಂಸ್ಥೆಗಳ ಸಾಮರಸ್ಯವನ್ನು ಕಂಡು ರೈತರು ಸಂಭ್ರಮಿಸಿದ್ದು ಕಣ್ಣಿಗೆ ತಂಪೆನಿಸಿತ್ತು.

ನಮ್ಮ ಕದಳೀವನದಲ್ಲಿ ಬೆಳೆದ 3 ಕ್ವಿಂಟಾಲ್ ಭತ್ತದ ಬೇರೆ ಬೇರೆ ದೇಶಿ ತಳಿಗಳ ಬೀಜಗಳನ್ನು "**ದೇಶಿ ಬೀಜ ಉಳಿಸಿ**" ಶೀರ್ಷಿಕೆಯಡಿಯಲ್ಲಿ ಸಣ್ಣದೊಂದು ಜಾತ್ರೆ ಮಾಡಿ ಹಲವು ರೈತರಿಗೆ ಹಂಚಿದ್ದೇವೆ. ಇದಕ್ಕೆ ಶರಣ ಮುದ್ದಣ್ಣ ಸಾವಯವ ಕೃಷಿಕರ ಬಳಗ, ಕುಂಬಳೂರು ಇವರ ಸಹಾಯ ನಮಗಿತ್ತು.

ಕ್ಷೇತ್ರೋತ್ಸವಗಳ ಸುಗ್ಗಿಯೆ ನಡೆದಿತ್ತು. ರೈತರೊಂದಿಗೆ ಬೆಳೆ ಸಂಬಂಧಿತ ಕಷ್ಟ ಸುಖಗಳ ಬಗೆಗಿನ ಚರ್ಚೆಗಳು ಅರ್ಥಪೂರ್ಣ ಮತ್ತು ಈ ಸಂದರ್ಭಗಳು ನಮ್ಮನ್ನು ರೈತರಿಗೆ ಮತ್ತಷ್ಟು ಹತ್ತಿರ ಮಾಡಿದವು. ಅನೇಕ ಸಂಯೋಜಿತ, ಪ್ರಾಯೋಜಿತ ಕಾರ್ಯಗಾರಗಳು, ತರಬೇತಿಗಳು (DIET,KSAMB,SGSY,Watershed) ಇತ್ಯಾದಿ ನಮ್ಮನ್ನು ಕೆಲಸಗಳಲ್ಲಿ ಮುಳುಗಿಸುವುದಕ್ಕೆ ಸಹಾಯ ಮಾಡಿದವು. ರಾಷ್ಟ್ರೀಯ ಮೀನು ಕೃಷಿಕರ ದಿನ (ಜುಲೈ 10) ಮತ್ತು ಪಾರ್ಥೇನಿಯಂ ತಿಳುವಳಿಕೆ ಸಪ್ತಾಹ (ಆಗಸ್ಟ್‌ನ ಕೊನೆ ವಾರ) ಇವು ನಮ್ಮ ಪ್ರಮುಖ ಆಚರಣೆಗಳಾಗಿದ್ದವು.

ಪ್ರಥಮ ಬಾರಿಗೆ ಜಿಲ್ಲೆಯಲ್ಲಿ ಪಂಗೇಶೀಯಸ್ ಮೀನನ್ನು ಕೊಳದಲ್ಲಿ ಬೆಳೆಸಿದ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ನಾಗರಕಟ್ಟೆಯ ಮರುಳಸಿದ್ದಪ್ಪ ಇವರ ಜಮೀನಿನಲ್ಲಿ ಆಚರಿಸಲಾಯ್ತು. ಜೊತೆಗೆ ನಮ್ಮ ಕೆ.ವಿ.ಕೆಯ ಕೊಳದಲ್ಲಿಯು ಒಳ್ಳೆಯ ಮೀನಿನ ಫಸಲು ಸಿಕ್ಕಿದೆ. ಮುಖ್ಯ ಕೃಷಿಯ ಜೊತೆಗೆ ಉಪ ಕಸುಬಾಗಿ ಮೀನುಕೃಷಿಯನ್ನು ಕೈಗೊಂಡು ಈ ರೈತರಿಗೆ ಲಾಭ ಬಂದಿದ್ದು ಅನೇಕ ರೈತರಿಗೆ ಆಸಕ್ತಿ ಕೆರಳಿಸಿದೆ. ಜೈ ಮತ್ಸೇಶ್ವರ! ಜೊತೆಗೆ ನಮ್ಮಲ್ಲಿ ಭತ್ತದಲ್ಲಿ ಮೀನನ್ನು ಬೆಳೆದು ಆದಾಯ ಹೆಚ್ಚಿಸಿಕೊಳ್ಳುವ ತಂತ್ರಜ್ಞಾನ ಪ್ರಾತ್ಯಕ್ಷಿಕೆ ಆರಂಭಗೊಂಡಿದೆ. ಅಲ್ಲಲ್ಲಿ ಮೆಕ್ಕೆಜೋಳ ಹಾಳಾಗಿ, ರೈತರಿಗೆ ಬೇಸರವಿದೆ. ಅಕ್ಕಡಿ ಬೆಳೆಗಳಿಗೆ ಇರುವ ಪ್ರಾಮುಖ್ಯತೆ ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುತ್ತಾ, ಅವರ ಕೊರಗಲ್ಲಿ ನಮ್ಮ ದನಿಗೂಡಿಸಿ, ಕೊರಗು ಬೇಗ ಕರಗಲೆಂದು ಆಶಿಸುತ್ತಾ, ಎಂದಿನಂತೆ ರೈತರ ಕೊರಗನ್ನು ದೂರಮಾಡಲು ಬೇಕಾದ ಹೆಚ್ಚಿನ ಶಕ್ತಿಗೆ ನಿಮ್ಮ ಪ್ರೀತಿಯ ಹಾರೈಕೆಗಳ ಅಗತ್ಯವನ್ನು ಜ್ಞಾಪಿಸುತ್ತಾ ನಮಿಸುತ್ತೇನೆ.

-ಡಾ. ದೇವರಾಜ್ ಟಿ.ಎನ್.

## ಹಮ್ಮಿಕೊಂಡ ವಿಶೇಷ ಕಾರ್ಯಕ್ರಮಗಳು



ದಿನಾಂಕ 4-07-2011 ರಂದು "ದೇಶಿ ಭತ್ತ ಉಳಿಸೋಣ: ಬೆಳೆಸೋಣ" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕೇಂದ್ರದವತಿಯಿಂದ ಮತ್ತು ಹರಿಹರ ತಾ. ಕುಂಬಳೂರಿನ ಶರಣ ಮುದ್ದಣ್ಣ ಸಾವಯವ ಕೃಷಿಕರ ಬಳಗದಿಂದ ಸಾವಯವ ದೇಶಿ ಭತ್ತ ಬೀಜವನ್ನು ಆಸಕ್ತ ರೈತರಿಗೆ ವಿತರಿಸಲಾಯಿತು.



ಮಾತೃ ಸಂಸ್ಥೆ: ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಸಿರಿಗೆರೆ-577541, ಚಿತ್ರದುರ್ಗ ತಾ. ದೂರವಾಣಿ: 08192-268829, ಮಿಂಚಂಚೆ: trdf@taralabalu.org





ದಿನಾಂಕ 11-07-2011 ರಂದು ದಾವಣಗೆರೆ ತಾ. ನಾಗರಕಟ್ಟೆಯಲ್ಲಿ "ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ" ಮತ್ತು ಪಂಗೇಶಿಯಸ್ ಮತ್ತು ಗೆಂಡೆ ಮೀನುಗಳ ಮಿಶ್ರಕೃಷಿ ಮುಂಚೂಣಿ ಪ್ರಾತ್ಯಕ್ಷಿಕೆ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಡಾ. ವೈ. ವಿಶ್ವನಾಥಶೆಟ್ಟಿ, ಸಹ ಸಂಶೋಧನಾ ನಿರ್ದೇಶಕರು, ಪ್ರಾ. ಸಂ. ಕೇಂದ್ರ, ನವುಲೆ, ಶಿವಮೊಗ್ಗ ಇವರು ಉದ್ಘಾಟಿಸಿದರು. ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಮತಿ ಶಿವಲೀಲಾ ಶೇಖರಪ್ಪ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಮೀನುಗಾರಿಕೆ ಇಲಾಖೆಯ ಶ್ರೀ ಜಯಣ್ಣ ಆರ್., ಹಿರಿಯ ಸಹಾಯಕ ಮೀನುಗಾರಿಕಾ ನಿರ್ದೇಶಕರು ಮತ್ತು ಸಿಬ್ಬಂದಿ ಹಾಗೂ ಪ್ರೊ. ಮಂಜಪ್ಪ ಕೆ., ಒಳನಾಡು ಮೀನುಗಾರಿಕಾ ವಿಭಾಗ, ಪ್ರಾ. ಸಂ. ಕೇಂದ್ರ, ನವುಲೆ, ಶಿವಮೊಗ್ಗ ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ನಾಗರಕಟ್ಟೆ ಮತ್ತು ಸುತ್ತ ಮುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು. ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಟಿ.ಎನ್. ದೇವರಾಜ ಮತ್ತು ಶ್ರೀ ರಘುರಾಜ ಜೆ. ರವರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಸಂಗ್ರಹ ಭಾಗವನ್ನು ದಿನಾಂಕ 26-07-2011 ರಂದು ಈ-ಟಿವಿ ಅನ್ನದಾತದಲ್ಲಿ ಪ್ರಸಾರ ಮಾಡಲಾಯಿತು.

## ಕೃಷಿ ತಂತ್ರಜ್ಞಾನ ಸಪ್ತಾಹ- 2011:

ದಿನಾಂಕ 16-08-2011 ರಿಂದ 20-08-2011 ರವರೆಗೆ ಕೇಂದ್ರವು ಕೃಷಿ ಇಲಾಖೆ, ದಾವಣಗೆರೆ ಮತ್ತು ಕೃಷಿಕ ಸಮಾಜ, ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ "ಕೃಷಿ ಕ್ಷೇತ್ರದ ಮೇಲೆ ಹವಾಮಾನ ವೈಪರೀತ್ಯದ ಪರಿಣಾಮಗಳು" ಎಂಬ ಮೂಲ ವಿಷಯವನ್ನು ಇಟ್ಟುಕೊಂಡು 'ಕೃಷಿ ತಂತ್ರಜ್ಞಾನ ಸಪ್ತಾಹ' ವನ್ನು ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 16-8-2011 ರಂದು ತೀರ್ಥರಾಮೇಶ್ವರ, ಹೊನ್ನಾಳಿ ತಾ॥



ದಿನಾಂಕ 17-8-2011 ರಂದು ತಾವರೆಕೆರೆ, ಚನ್ನಗಿರಿ ತಾ॥



ದಿನಾಂಕ 18-8-2011 ರಂದು ಹಿರೇಅರಕೆರೆ, ಜಗಳೂರು ತಾ॥



ದಿನಾಂಕ 19-8-2011 ರಂದು ಕಂಚಿಕೆರೆ, ಹರಪನಹಳ್ಳಿ ತಾ॥



ದಿನಾಂಕ 20-8-2011 ರಂದು ತ.ಕೃ.ವಿ.ಕೇಂದ್ರ, ದಾವಣಗೆರೆ , ಹರಿಹರ ತಾ॥




ಕೇಂದ್ರವು ದಿನಾಂಕ 16-08-2011 ರಿಂದ 20-08-2011 ರ ವರೆಗೆ 'ಪಾರ್ಥೇನಿಯಂ ನಿರ್ಮೂಲನಾ ಸಪ್ತಾಹ' ಹಮ್ಮಿಕೊಳ್ಳಲಾಗಿತ್ತು.

ದಿನಾಂಕ 9-07-2011 ರಂದು ಆವರಗೆರೆ ಗ್ರಾಮದಲ್ಲಿ ಪಶು ಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ, ದಾವಣಗೆರೆ ಮತ್ತು ಸಾರುಡಿ ಸಂಸ್ಥೆ, ಆವರಗೆರೆ ಇವರ ಸಂಯುಕ್ತಾಶ್ರದಲ್ಲಿ ಪಶು ಚಿಕಿತ್ಸಾ ಶಿಬಿರವನ್ನು ಏರ್ಪಡಿಸಿ 150 ಕ್ಕೂ ಹೆಚ್ಚು ರಾಸುಗಳಿಗೆ ಗಂಟಲು ಬೇನೆ / ಕಾಲುಬಾಯಿ ಬೇನೆ ರೋಗಗಳಿಗೆ ಚುಚ್ಚು ಮದ್ದು ಮತ್ತು ಜಂತುಹುಳು ನಿವಾರಕ ಔಷಧಿಯನ್ನು ನೀಡಲಾಗಿದೆ.

## ಹಮ್ಮಿಕೊಂಡ ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು

ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆ ಸಲಹಾ ಸಮಿತಿ, ಕೃ.ವಿ.ವಿ., ಬೆಂಗಳೂರು ಪ್ರಾಯೋಜಿತ ತರಬೇತಿ



ದಿನಾಂಕ 23-08-2011 ರಿಂದ 24-08-2011 ರವರೆಗೆ 'ರೈತ ಮತ್ತು ರೈತ ಮಹಿಳೆಯರಿಗೆ ಪರಿಸರ ನಿರ್ವಹಣಾ ತರಬೇತಿ'.30 ರೈತರು.



ದಿನಾಂಕ 25-08-11 ರಿಂದ 27-08-2011 ರ ವರೆಗೆ 'ನೀರುಗಂಟಿಗಳಿಗೆ ಕೃಷಿಯಲ್ಲಿ ನೀರು ನಿರ್ವಹಣೆ ಬಗ್ಗೆ ತರಬೇತಿ'. 30 ನೀರುಗಂಟಿಗಳು.

DIET, ದಾವಣಗೆರೆ ಪ್ರಾಯೋಜಿತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ "ಶಾಲಾ ಕೈತೋಟ ಸಬಲೀಕರಣ" ವಿಷಯದಲ್ಲಿ ರಾಜ್ಯದಲ್ಲೆ ಪ್ರಥಮ ಬಾರಿಗೆ ಜಿಲ್ಲೆಯಲ್ಲಿ ತರಬೇತಿ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 05-08-2011 ರಿಂದ 06-08-2011 ರ ವರೆಗೆ 28 ಶಿಕ್ಷಕರು. ದಿನಾಂಕ 12-08-2011 ರಿಂದ 13-08-2011 ರ ವರೆಗೆ 35 ಶಿಕ್ಷಕರು.

ದಿನಾಂಕ 16-09-2011 ರಂದು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು ಪ್ರಾಯೋಜಿತ 'ಮೆಕ್ಕೆಜೋಳದಲ್ಲಿ ಕೊಯ್ಲೋತ್ತರ ತಾಂತ್ರಿಕತೆಗಳು ಮತ್ತು ಮಾರಾಟ' ಬಗ್ಗೆ 106 ರೈತರಿಗೆ ತರಬೇತಿ ಹಮ್ಮಿಕೊಳ್ಳಲಾಗಿತ್ತು.

ದಿನಾಂಕ 29-07-2011 ರಂದು ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ, ದಾವಣಗೆರೆ ಇವರ ಪ್ರಾಯೋಜಿತ 'ಮಳೆ ನೀರು ಕೊಯ್ಲು ವಿನ್ಯಾಸಗಳಲ್ಲಿ ಮೀನು ಸಾಕಾಣಿಕೆ' ಎಂಬ ವಿಷಯದ ಬಗ್ಗೆ 64 ರೈತರಿಗೆ ತರಬೇತಿ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 19-09-2011 ರಂದು ಕೇಂದ್ರ ಸಿಹಿ ನೀರು ಮೀನು ಕೃಷಿ ಸಂಸ್ಥೆ, ಬೆಂಗಳೂರು ರವರು ಪ್ರಾಯೋಜಿತ 'ಮೀನು ಕೃಷಿಯಲ್ಲಿ ಆಹಾರಗಳು' ತರಬೇತಿ ಹಮ್ಮಿಕೊಳ್ಳಲಾಗಿತ್ತು.



ಜಿಲ್ಲಾ ಪಂಚಾಯತ್, ದಾವಣಗೆರೆ ಪ್ರಾಯೋಜಿತ ಎಸ್‌ಜಿಎಸ್‌ವೈ ಯೋಜನೆಯಡಿ 'ಸಮಗ್ರ ಹೈನುಗಾರಿಕೆ ಮತ್ತು ಎರೆಗೊಬ್ಬರ ತಯಾರಿಕೆ ಪರಿಣಿತ ತರಬೇತಿ' ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಆರು ದಿನಗಳ 8 ತರಬೇತಿ ಕಾರ್ಯಕ್ರಮದಲ್ಲಿ ಜಿಲ್ಲೆಯ ಸ್ವ-ಸಹಾಯ ಸಂಘದ ಮಹಿಳೆಯರಿಗೆ ತರಬೇತಿ ನೀಡಲಾಯಿತು.

## ಕ್ಷೇತ್ರೋತ್ಸವ



ದಾವಣಗೆರೆ ತಾ. ಕೊಡಗನೂರು ಗ್ರಾಮದಲ್ಲಿ ತಿಂಗಳ ಹುರುಳಿಯಲ್ಲಿ " ಅರ್ಕಾ ಸುವಿಧಾ " ತಳಿಯ ಕ್ಷೇತ್ರೋತ್ಸವ ಹಮ್ಮಿಕೊಳ್ಳಲಾಗಿತ್ತು.







ದಾವಣಗೆರೆ ತಾ. ಕಬ್ಬೂರು ಗ್ರಾಮದಲ್ಲಿ ಹಿಟ್ಟು ತಿಗಣೆಯಿಂದ ಬಾಧೆಗೀಡಾದ ಪಪ್ಪಾಯ ತೋಟದಲ್ಲಿ ಕೇಂದ್ರದ ತಜ್ಞರಾದ ಶ್ರೀ ಪ್ರಸನ್ನಕುಮಾರ ಎನ್. ರವರ ಮಾರ್ಗದರ್ಶನದಲ್ಲಿ ಪರತಂತ್ರ ಜೀವಿಯಾದ "ಎಸಿರೋಫೇಗಸ್ ಪಪ್ಪಾಯ" ಬಿಡುಗಡೆ ಮಾಡಿ ಬೆಳೆಗೆ ಹೊಸ ಚೈತನ್ಯ ಕೊಡಲಾಯಿತು.







ಅಡಿಕೆಯಲ್ಲಿ ಬಸವನಹುಳದ ಬಾಧೆಗೆ ಕೇಂದ್ರದ ತಜ್ಞರಾದ ಶ್ರೀ ಪ್ರಸನ್ನಕುಮಾರ ಎನ್. ರವರ ಸಲಹೆಯಂತೆ ತೌಡು 5 ಕೆ.ಜಿ., ಬೆಲ್ಲ 1 ಕೆ.ಜಿ. ಮತ್ತು ಮಿಥೋಮಿಲ್ 50 ಗ್ರಾಂ. ಕೀಟನಾಶಕ ಬಳಸಿ ಸಮಗ್ರವಾಗಿ ನಿರ್ವಹಣೆ ಮಾಡಲಾಯಿತು.



ಜಗಳೂರು ತಾಲ್ಲೂಕು ಬಿದರಿಕೆರೆ ಗ್ರಾಮಕ್ಕೆ ರಾಗಿ (ಜಿಪಿಯು-28) ಸಮಗ್ರ ಬೆಳೆ ನಿರ್ವಹಣೆ ಮುಂಚೂಣಿ ಪ್ರಾತ್ಯಕ್ಷಿಕೆಗೆ ವೈಜ್ಞಾನಿಕ ಕ್ಷೇತ್ರ ಭೇಟಿ.



ಹತ್ತಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಮುಂಚೂಣಿ ಪ್ರಾತ್ಯಕ್ಷಿಕೆಯಲ್ಲಿ ಪೊಟ್ಯಾಷಿಯಂ ನೈಟ್ರೇಟ್ (1%) ಸಿಂಪರಣಾ ಮಾಡುತ್ತಿರುವುದು.

### ಈ-ಟಿವಿ ಅನ್ನದಾತ ವಾಹಿನಿಯಲ್ಲಿ ಚಿತ್ರರಗೊಂಡ ಕಾರ್ಯಕ್ರಮಗಳು

| ಕ್ರ. ಸಂ. | ಶೀರ್ಷಿಕೆ | ದಿನಾಂಕ | ತಜ್ಞರು |
|---|---|---|---|
| 1 | ಮೆಕ್ಕೆಜೋಳದಲ್ಲಿ ಲಘುಪೋಷಕಾಂಶಗಳ ಬಳಕೆ ಹಾಗೂ ಕಾಂಡ ಕೊರಕದ ನಿರ್ವಹಣೆ | 02-08-2011 | ಶ್ರೀ ಮಲ್ಲಿಕಾರ್ಜುನ ಬಿ.ಓ. |
| 2 | ತಿಂಗಳು ಹುರುಳಿಯ ಆಧುನಿಕ ಬೇಸಾಯ ಕ್ರಮಗಳು | 04-08-2011 | ಶ್ರೀ ಬಸವನಗೌಡ ಎಂ.ಜಿ. |
| 3 | ಹತ್ತಿ ಬೆಳೆಯಲ್ಲಿ ಲಘುಪೋಷಕಾಂಶಗಳಾದ ಪ್ಲಾನೋಫಿಕ್ಸ್ ಮತ್ತು ಪೊಟ್ಯಾಷಿಯಂ ನೈಟ್ರೇಟ್ ಬಳಕೆ | 05-08-2011 | ಶ್ರೀ ಮಲ್ಲಿಕಾರ್ಜುನ ಬಿ.ಓ. |
| 4 | ಮೆಕ್ಕೆಜೋಳದಲ್ಲಿ ಮೇಲುಗೊಬ್ಬರ ಹಾಗೂ ಕಾಂಡ ಕೊರಕದ ನಿರ್ವಹಣಾ ಕ್ರಮಗಳು | 08-08-2011 | ಶ್ರೀ ಮಲ್ಲಿಕಾರ್ಜುನ ಬಿ.ಓ. |
| 5 | ಅಡಿಕೆ ತೋಟದಲ್ಲಿ ವೆಲ್‌ವೆಟ್ ಬೀನ್ಸ್ ಹಸಿರೆಲೆ ಗೊಬ್ಬರದ ಬೇಸಾಯ ಕ್ರಮಗಳು | 14-09-2011 | ಶ್ರೀ ಬಸವನಗೌಡ ಎಂ.ಜಿ. |
| 6 | ತೊಗರಿಯಲ್ಲಿ ಕಾಯಿ ಕೊರಕ ಮತ್ತು ಸೊರಗು ರೋಗದ ಸಮಗ್ರ ನಿರ್ವಹಣೆ | 26-09-2011 | ಶ್ರೀ ಪ್ರಸನ್ನಕುಮಾರ ಎನ್. |
| 7 | ಮೆಕ್ಕೆಜೋಳದಲ್ಲಿ ಕೊಯ್ಲೋತ್ತರ ತಂತ್ರಜ್ಞಾನ | 27-09-2011 | ಶ್ರೀ ಮಲ್ಲಿಕಾರ್ಜುನ ಬಿ.ಓ. |

## ಕೃಷಿ ಮುನ್ಸೂಚನೆಗಳು

**ಸೂರ್ಯಕಾಂತಿ:** ಬೂದಿರೋಗ ನಿರೋಧಕ ತಳಿ KBSH-53 ಅನ್ನು ಬಳಕೆ ಮಾಡಬೇಕು. ಪ್ರತಿ ಗುಣಿಗೆ ಎರಡೆರಡು ಹಾಕುವುದರಿಂದ ಸಸ್ಯ ಸಂಖ್ಯೆ ಕಾಪಾಡಲು ಸಾಧ್ಯವಾಗುವುದು. ಬಿತ್ತಿದ 15-20 ದಿನಗಳಲ್ಲಿ ಪ್ರತಿ ಗುಣಿಗೆ ಒಂದೇ ಸಸಿ ಬಿಟ್ಟು ಉಳಿದ ಸಸಿಯನ್ನು ತೆಗೆಯಬೇಕು. ಹೂವು ಬಿಡುವ ಹಂತದಲ್ಲಿ 8 ರಿಂದ 10 ದಿನಗಳವರೆಗೆ ಕೈಯಿಂದ ಪರಾಗಸ್ಪರ್ಶ ಮಾಡುವುದರಿಂದ ಶೇ. 20 ರಷ್ಟು ಹೆಚ್ಚುಇಳುವರಿ ಪಡೆಯಬಹುದು. ಸೂರ್ಯಕಾಂತಿಯ ನಂತರ ಆ ಜಮೀನಿನಲ್ಲಿ ಸೂರ್ಯಕಾಂತಿ ಬೆಳೆಯಬಾರದು.

**ಭತ್ತ: ಕುತ್ತಿಗೆ ಕೊಳೆ ರೋಗ**

ಎಲೆಯ ಮೇಲೆ ಕಂದು ಬಣ್ಣದ ಚುಕ್ಕೆಗಳು ಕಂಡು ರೋಗ ಹೆಚ್ಚಾದಾಗ ಎಲೆಗಳು ಒಣಗುತ್ತವೆ. ರೋಗವು ಕತ್ತಿನ/ತೆನೆಯ ಬುಡದ ಗಣ್ಣಿಗೆ ತಗುಲಿದಾಗ ಆ ಭಾಗ ಕಪ್ಪಾಗಿ ತೆನೆ ಮುರಿದು ಬೀಳುತ್ತದೆ.

**ಹತೋಟಿ:** ಬೀಜಗಳನ್ನು ಕಾರ್ಬನ್‌ಡೈಜಿಮ್ 2 ಗ್ರಾಂ/ಕೆ.ಜಿ ಬೀಜಕ್ಕೆ ಉಪಚರಿಸಿ ಬಿತ್ತಬೇಕು. ಗದ್ದೆಯ ಬದುವಿನ ಮೇಲಿರುವ ಕಳೆಗಳನ್ನು ನಾಶಪಡಿಸಬೇಕು. ತೆನೆ ಹೊರ ಬರುವಾಗ ಮತ್ತು ಕಾಳು ಕಟ್ಟುವ ಸಮಯದಲ್ಲಿ ಹಿನೋಸಾನ್ 1 ಮೀಲೀ/ಲೀ ಅಥವಾ ಟ್ರೈಸೈಕ್ಲಜೋಲ್ 0.6 ಗ್ರಾಂ/ಲೀ ಸಿಂಪಡಿಸಬೇಕು.

**ಕಡಲೆ: ಕಾಯಿಕೊರಕ**

**ಲಕ್ಷಣ:** ಮರಿಹುಳುಗಳು ಎಲೆಯನ್ನು ಕೆರೆದು ತಿನ್ನುವುದರಿಂದ ಬಿಳಿಯ ಮಚ್ಚೆಗಳು ಕಂಡುಬರುತ್ತವೆ. ಭಾದೆ ಜಾಸ್ತಿಯಾದಾಗ ಗಿಡಗಳು ಒಣಗುತ್ತವೆ. ಕಾಯಿಕಟ್ಟುವ ಹಂತದಲ್ಲಿ ಒಂದು ಕೀಡೆ 20-30 ಕಡಲೆಕಾಯಿಗಳನ್ನು ನಾಶಮಾಡುತ್ತದೆ.

**ಹತೋಟಿ:** ಮಾಗಿ ಹುಳುಮೆ ಮಾಡಬೇಕು. ಕವಲೊಡೆದ ಟೊಂಗೆಗಳನ್ನು ಎಕರೆಗೆ 10 ರಂತೆ ಬೆಳೆಯಿಂದ 2 ಅಡಿ ಮೇಲಿರುವಂತೆ ನೆಡಬೇಕು. ಎಕರೆಗೆ 2 ರಂತೆ ಮೋಹಕಬಲೆ ಬಳಸಿ ಕೀಟ ಸಮೀಕ್ಷೆ ಮಾಡಬೇಕು. ಮೊದಲನೆ ಸಿಂಪರಣೆಯಾಗಿ ತತ್ತಿನಾಶಕಗಳಾದ ಮಿಥೋಮಿಲ್ 40 ಎಸ್‌ಪಿ 0.6 ಗ್ರಾಂ/ಲೀ ಅಥವಾ ಪ್ರೋಫೇನೋಪಾಸ್ 50 ಇಸಿ 3 ಮೀಲೀ/ಲೀ ಅಥವಾ ನೀರಿನ ಅನಾನುಕೂಲ ಇರುವಲ್ಲಿ ಮೇಲಾಥಿಯಾನ್ ಶೇ 5ರ ಎಕರೆಗೆ 10 ಕಿ.ಗ್ರಾಂ ಧೂಳಿಕರಿಸಬೇಕು.

**ಬೇರುಕೊಳೆ ಮತ್ತು ಸೊರಗು ರೋಗ:**

**ಲಕ್ಷಣ:** ಬಿತ್ತಿದ ನಂತರ ಭೂಮಿಯಿಂದ ಮೇಲಿರುವ ಗಿಡದ ಕುತ್ತಿಗೆಯ ಬಾಗವು ಕೊಳೆಯುತ್ತದೆ. ಗಿಡಗಳು ಅಲ್ಲಲ್ಲಿ ಗುಂಪಾಗಿ ಒಣಗುತ್ತವೆ.

**ಹತೋಟಿ:** ಬಿತ್ತನೆ ಬೀಜಗಳನ್ನು ಟ್ರೈಕೊಡರ್ಮ 4 ಗ್ರಾಂ/ಕೆ.ಜಿ. ಬೀಜಕ್ಕೆ ಉಪಚಾರ ಮಾಡಿ ಬಿತ್ತನೆ ಮಾಡಬೇಕು.

**ತಿಂಗಳ ಹುರುಳಿಯಲ್ಲಿ ಹೊಸ ತಳಿಯ ಪರಿಚಯ**

ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ, ಬೆಂಗಳೂರು ಇವರು ಅಭಿವೃದ್ಧಿ ಪಡಿಸಿರುವ ಅಧಿಕ ಇಳುವರಿ ಕೊಡುವ ತಿಂಗಳ ಹುರುಳಿ ತಳಿ "ಅರ್ಕಾ ಸುವಿಧಾ" ವನ್ನು ಚಳಿಗಾಲದಲ್ಲಿ ಬೆಳೆಯಬಹುದು. ತಳಿಯ ಗಿಡಗಳು ಗಿಡ್ಡವಾಗಿದ್ದು ವರ್ಷದ ಎಲ್ಲಾ ಕಾಲಗಳಲ್ಲೂ ಬೆಳೆಯಲು ಸೂಕ್ತ ಕಾಯಿಗಳು ನೇರವಾಗಿದ್ದು ಗುಂಡಾಗಿದ್ದು, ತಿಳಿ ಹಸಿರು ಬಣ್ಣದಿಂದ ಕೂಡಿವೆ ನಾರು ಈ ತಳಿಯಲ್ಲಿ ಇರುವುದಿಲ್ಲ. ಬೆಳೆಯ ಅವಧಿ 70 ದಿನಗಳಿದ್ದು, ಹೆಕ್ಟೇರಿಗೆ 19 ಟನ್ ಇಳುವರಿಯನ್ನು ನಿರೀಕ್ಷಿಸಬಹುದು. ಈ ತಳಿಯನ್ನು ನಮ್ಮ ಜಿಲ್ಲೆಯಾದ್ಯಂತ ಬೆಳೆಯಲು ಅವಕಾಶವಿದೆ.

**ಅಡಿಕೆ ತೋಟಗಳಲ್ಲಿ ಹಸಿರೆಲೆ ಗೊಬ್ಬರಗಳು**

ಅಡಿಕೆ ತೋಟಗಳಲ್ಲಿ ಕೊಯ್ಲು ಮುಗಿಯುತ್ತಾ ಬಂದಿದ್ದು, ರೈತರು ಗಿಡದಲ್ಲಿ ಕೊನೆಯದಾಗಿ ಬರುವ ಕುಂಚಗಳನ್ನು ತೆಗೆದು ಹಾಕಬೇಕು. ತೋಟವನ್ನು ಸ್ವಚ್ಛಮಾಡಿ ಯಾವುದಾದರೂ ಹಸಿರೆಲೆ ಗೊಬ್ಬರ ಗಿಡವನ್ನು (ಸೆಣಬು , ಡಯಾಂಚ, ವೆಲ್‌ವೆಟ್ ಬೀನ್ಸ್) ಅಂತರ ಬೆಳೆಯಾಗಿ ಬಿತ್ತನೆ ಮಾಡಬಹುದು. ಇದರಿಂದ ಕಳೆಯ ಹಾವಳಿಯಿಂದ ಮುಕ್ತವಾಗಿ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಸಹಾಯವಾಗುತ್ತದೆ.

**ಬಾಳೆಗೊನೆಗೆ ಪೋಷಕಾಂಶ ಪೂರೈಕೆ ಕ್ರಮ:-**

ಬಾಳೆಯಲ್ಲಿ ಹಣ್ಣಿನ ಗೊನೆಯ ಹೊರಚಾಚಿ, ಕಾಯಿಗಳು ಹಿಡಿದ ಕೂಡಲೇ ಹೂ ಮೊಗ್ಗನ್ನು ಕಡಿದು ಹಾಕುವುದು ಒಂದು ಮುಖ್ಯ ಅಂಶವಾಗಿದೆ. ಏಕೆಂದರೆ, ಹೂವು ಅಧಿಕ ಪ್ರಮಾಣದಲ್ಲಿ ಬಾಳೆಯಿಂದ ಶಕ್ತಿ ಹಾಗೂ ಪೋಷಕಾಂಶಗಳನ್ನು ಹೀರಿ ಹಾಕುತ್ತದೆ. ಹೂ ಮೊಗ್ಗನ್ನು ಕಡಿದ ದಿಂಡಿನ ಭಾಗವನ್ನು, ಅರ್ಧ ಕೆ.ಜಿ. ತಾಜಾ ಸಗಣಿ ಮತ್ತು 2.5 ಗ್ರಾಂ ಯೂರಿಯ ಹಾಗೂ ಸಲ್ಫೇಟ್ ಆಫ್ ಪೊಟ್ಯಾಷ್‌ಗೆ ತಕ್ಕಷ್ಟು ನೀರು ಸೇರಿಸಿ ಚೆನ್ನಾಗಿ ಕಲಕಿ, 15 X 25 ಸೆಂ.ಮೀ. ಅಳತೆಯ ಪ್ಲಾಸ್ಟಿಕ್ ಚೀಲದಲ್ಲಿಟ್ಟು, ಕಡಿದ ದಿಂಡನ್ನು ಮುಳುಗಿಸಿ, ಚೀಲವನ್ನು ಭದ್ರವಾಗಿ ಕಟ್ಟಬೇಕು. ರೋಬಸ್ಟಾ ಬಾಳೆಗೆ ಅರ್ಧ ಕೆ.ಜಿ. ತಾಜಾ ಸಗಣಿಯಲ್ಲಿ ತಲಾ 7.5 ಗ್ರಾಂ ಯೂರಿಯ ಹಾಗೂ ಸಲ್ಫೇಟ್ ಆಫ್ ಪೊಟ್ಯಾಷ್ ಸಾಕು. ಗ್ರಾಂಡ್ ನೈನ (ಜಿ-9) ಬಾಳೆಯಲ್ಲಿ ತಲಾ 10 ಗ್ರಾಂ ನಷ್ಟು ಯುರಿಯಾ ಹಾಗೂ ಸಲ್ಫೇಟ್ ಆಫ್ ಪೊಟ್ಯಾಷ್ ಬೇಕಾಗುತ್ತದೆ. ಈ ರೀತಿ ಕಟ್ಟಿದ ಚೀಲವನ್ನು ಕೊಯ್ಲಿನ ಸಮಯದಲ್ಲಿ ತೆಗೆಯಬಹುದು. ಈ ವಿಧಾನವನ್ನು ಅನುಸರಿಸಿ ಬಾಳೆ ಗೊನೆಯ ಪೋಷಣೆ ಮಾಡುವುದರಿಂದ ಏಲಕ್ಕಿ ಬಾಳೆಯಲ್ಲಿ 2-3 ಕೆ.ಜಿ. ರೊಬಸ್ಟಾ ಹಾಗೂ ಗ್ರಾಂಡ್ ನೈನ್ ತಳಿಯಲ್ಲಿ 3-5 ಕೆ.ಜಿ. ಗೊನೆಯ ತೂಕ ಹೆಚ್ಚುವುದು.

**ಪಶು ವಿಜ್ಞಾನ**

ಹೈನುರಾಸುಗಳಿಗೆ ಅತ್ಯುತ್ತಮ ದ್ವಿದಳ ದಾನ್ಯದ ಮೇವಾದ ಕುದುರೆಮೆಂತೆಯನ್ನು ಬಿತ್ತನೆ ಮಾಡಲು ಇದು ಸೂಕ್ತ ಸಮಯವಾಗಿರುತ್ತದೆ. ಒಂದೂವರೆ ಅಡಿ ಸಾಲಿನಲ್ಲಿ ಕುದುರೆಮೆಂತೆ ಬೀಜವನ್ನು 1 ಅಂಗುಲ ಆಳದಲ್ಲಿ ಬಿತ್ತನೆ ಮಾಡಬೇಕು.

❖ ಹೆಚ್ಚು ಹಾಲು ಹಿಂಡುವ ರಾಸುಗಳಿಗೆ ಪ್ರತಿದಿನ 50 ಗ್ರಾಂ ಖನಿಜ ಮಿಶ್ರಣ ಪುಡಿಯನ್ನು ತಪ್ಪದೆ ನೀಡುವುದು ಸೂಕ್ತ, ಇದರಿಂದ ಹೈನುರಾಸುಗಳಿಗೆ ಬರುವ ಹಾಲಿನ ಜ್ವರವನ್ನು ತಪ್ಪಿಸಬಹುದು. ❖ ಕುರಿಗಳಿಗೆ ಕರುಳುಬೇನೆ ತಡೆಗಟ್ಟಲು ಚುಚ್ಚುಮದ್ದು ಹಾಕಿಸಲು ಇದು ಸೂಕ್ತ ಸಮಯ. ರೈತಬಾಂಧವರು ಪಶುಪಾಲನಾ ಮತ್ತು ಪಶುವೈದ್ಯ ಇಲಾಕೆಯನ್ನು ಸಂಪರ್ಕಿಸಿ ಉಚಿತವಾಗಿ ಲಸಿಕೆಯನ್ನು ಪಡೆಯಬಹುದಾಗಿದೆ.

**ಮೀನು ಕೃಷಿ**

ಬಲಿತ ಗೆಂಡೆ ಮೀನುಮರಿಗಳನ್ನು ಕೃಷಿ ಹೊಂಡ, ಬಾವಿ, ಚೆಕ್ ಡ್ಯಾಂ ಗಳಲ್ಲಿ ಬಿಡಲು ಸಕಾಲ. ಪ್ರತಿ ಚದರಕ್ಕೆ 2-3 ಮೀನುಮರಿಗಳನ್ನು ದಾಸ್ತಾನು ಮಾಡಬಹುದು. ಹೊಂಡದ ದಡದ ಮೇಲೆ ನುಗ್ಗೆ, ಪಪ್ಪಾಯ, ಬಾಳೆ, ಬೀನ್ಸ್, ಬದನೆ, ಮೆಣಸಿಕಾಯಿ, ಟೋಮೆಟೊ, ಹಸಿರುಸೊಪ್ಪುಗಳು ಇತ್ಯಾದಿಗಳನ್ನು ಬೆಳೆಯಬಹುದು.

❖ ಪ್ರತಿ 15 ದಿನಕ್ಕೊಮ್ಮೆ ಚದರಕ್ಕೆ 1 ಕೆ.ಜಿ ಯಂತೆ ದನದ ಸಗಣಿಯನ್ನು ರಾಡಿ ಮಾಡಿ ಹೊಂಡದ ನೀರಲ್ಲಿ ಚೆಲ್ಲಬೇಕು.

❖ ಮೇಲು ಆಹಾರವಾಗಿ ಹಸಿರು ಹುಲ್ಲು, ತ್ಯಾಜ್ಯ ಆಹಾರ ವಸ್ತುಗಳು, ಯಾವುದೇ ಹಿಂಡಿ,ತೌಡುಗಳನ್ನು ಉಂಡೆಮಾಡಿ ಚೀಲಗಳಲ್ಲಿಟ್ಟು ಮೀನುಗಳಿಗೆ ತಿನ್ನಲು ನೀಡಬಹುದು.

ಸಂಪಾದಕರು: ಡಾ. ದೇವರಾಜ ಟಿ.ಎನ್.

ಸಹ ಸಂಪಾದಕರು: ಶ್ರೀ ರಘುರಾಜ ಜೆ., ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ. ಜಯದೇವಪ್ಪ ಜಿ.ಕೆ., ಶ್ರೀ ಪ್ರಸನ್ನಕುಮಾರ ಎನ್., ಡಾ. ಪ್ರದೀಪ್ ಹೆಚ್.ಎಂ.

ಪ್ರಕಾಶಕರು: ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್, ಬಿಐಇಟಿ ರಸ್ತೆ, ದಾವಣಗೆರೆ-577004, ಕರ್ನಾಟಕ